ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
ಸಿ.ಸಿ.1717/2024

| | | |
|---|---|---|
| ಸಾಕ್ಷಿದಾರರ ಹೆಸರು | : ಸುರೇಶ್ ವಿಠಲ್ ಗಡ್ಡಿ | ಪ್ರಾಸಾ -1 |
| ತಂದೆಯ ಹೆಸರು | : ವಿಠಲ್ | ಚಾಸಾ-1 |
| ವಯಸ್ಸು | : 35 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಚಾಲಕ, | ದಿನಾಂಕ: 09.04.2025 |
| ವಾಸಸ್ಥಳ | : KSRTC, ಮೂಡಿಗೆರೆ | |

:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:

ನಾನು ಕಳೆದ 9 ವರ್ಷ ಗಳಿಂದ ಮೂಡಿಗೆರೆ KSRTC ಡಿಪೋ ದಲ್ಲಿ ಚಾಲಕ ವೃತ್ತಿ ಮಾಡುತಿದ್ದೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ಈ ಹಿಂದೆ ಎಲ್ಲೂ ನೋಡಿಲ್ಲ. ಮೃತ ರಜಿತ್ ರವರ ಪರಿಚಯ ನನಗಿಲ್ಲ. ಚಾಸಾ-8 ಮತ್ತು 9 ರವರ ಪರಿಚಯ ನನಗಿದೆ.

ದಿ.03.04.2024 ರಂದು ನಾನು ಮೂಡಿಗೆರೆಯಿಂದ ಸಕಲೇಶಪುರ ಮಾರ್ಗದ KA-18-F-654 ಬಸ್ಸನ್ನು ಚಾಲನೆ ಮಾಡಿಕೊಂಡು ಸಂಜೆ 4.30 ರ ಸಮಯಕ್ಕೆ ಮೂಡಿಗೆರೆ ಬಸ್ ನಿಲ್ದಾಣದಿಂದ ಹೊರಟು ಸಂಜೆ.4.45 ರ ಸಮಯಕ್ಕೆ ಮುತ್ತಿಗೆಪುರದ ಹರೀಶ್ ಪಿ ಯು ಕಾಲೇಜು ಬಳಿ ಜನ್ನಾಪುರ ಮಾರ್ಗವಾಗಿ ಹೋಗುತ್ತಿರುವಾಗ ಎದುರಿನಿಂದ ಬಂದ ಲಾರಿಯು ನನ್ನ ಬಸ್ ನಲ್ಲಿ ಕೂತಿದ್ದ ಮೃತ ರಜಿತ್ ರವರ ಬಲಗೈ ಒಡೆದುಕೊಂಡು ಹೋಯ್ತು. ಮೃತ ರಜಿತ್ ರವರು ತಮ್ಮ ಬಲಗೈ ಯನ್ನು ಬಸ್ ನ ಕಿಟಕಿಯಿಂದ ಹೊರಗೆ ಹಾಕಿ ಕುಳಿತಿದ್ದರು. ಈ ಕಾರಣ ಎದುರಿನಿಂದ ಬಂದ ಲಾರಿ ಅವರ ಕೈಯನ್ನು ತಾಗಿಕೊಂಡು ಹೋಗಿರುತ್ತದೆ. ನಮ್ಮ ಬಸ್ ನ ಹಿಂಬದಿಯ ಗಾಜು ಸಹಾ ಒಡೆದು ಹೋಗಿರುತ್ತದೆ. ಸದರಿ ಲಾರಿಯ ನೊಂದಣಿ ಸಂಖ್ಯೆ KA-18-D-7272 ಆಗಿದ್ದು ಅದನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಲಾರಿ ಚಾಲಕನ ವಿವರವನ್ನು ನಾನು ಪೋಲೀಸರಿಗೆ ಹೇಳಿಲ್ಲ. ಅಪಘಾತದ ನಂತರ ಮೂಡಿಗೆರೆ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದೇನೆ. ನಂತರ ದಿ.04.03.2024 ರಂದು ಪೋಲೀಸರಿಗೆ ಅಪಘಾತ ನಡೆದ ಸ್ಥಳವನ್ನು ತೋರಿಸಿರುತ್ತೇನೆ. ಅಲ್ಲಿ ಪೋಲೀಸರು ಮಹಜರ್ ಬರೆದಿದ್ದಾರೆ. ನಂತರ ಪೊಲೀಸ್ ಠಾಣೆ ಯ ಬಳಿ ನಮ್ಮ ಬಸ್ಸ್ ಮತ್ತು ಲಾರಿಯನ್ನು ವಶಕ್ಕೆ ಪಡೆದಿದ್ದಾರೆ. ಅಪಘಾತ ವಾದ ದಿನದಂದೆ ರಜಿತ್ ರವರು ಮೃತ ಪಟ್ಟಿದ್ದಾರೆ ಎಂದು ತಿಳಿದುಕೊಂಡೆ.

ಸಾಕ್ಷಿಯು ದಿ.03.04.2024 ರ ದೂರು, ಪ್ರ.ವ.ವ, ದಿ.05.04.2024 ರ ಸ್ಥಳ ಪಂಚನಾಮೆ ಮತ್ತು ಅಮಾನತು ಪಂಚನಾಮೆ ಹಾಗೂ ಅದಕ್ಕೆ ಅಡಕಗೊಂಡ ಪೋಟೋಗಳನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಗಳನ್ನು ಸಿಡಿ ಮತ್ತು ಪ್ರಮಾಣ ಪತ್ರದೊಂದಿದೆ ಕ್ರಮವಾಗಿ ನಿಪಿ-1 ರಿಂದ 12 ಎಂದು, ಸಾಕ್ಷಿಯ ಸಹಿಗಳನ್ನು 1(ಎ) ರಿಂದ 3(ಎ) ಮತ್ತು 6(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

ಪಾಟೀ ಸವಾಲು: ಪ್ರಾಜ್ಞ್ಯಾಸ.ಸ.ಅ. ರವರಿಂದ:

ದಿ.05.04.2024 ರಂದು ಬೆ.11.45 ರಿಂದ 12.45 ರವರೆಗೆ ಸ್ಥಳ ಮಹಜರ್ ಬರೆಯಲಾಗಿದೆ ಎಂದರೆ ಸರಿ. ಅದೇ ದಿನ ಮ.1.15 ರಿಂದ 2.00 ಗಂಟೆಯ ವರೆಗೂ ಅಮಾನತು ಮಹಜರ್ ಬರೆಯಲಾಗಿದೆ ಎಂದರೆ ಸರಿ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ನಾನು ಹೇಳಿದ ಲಾರಿಯನ್ನು ಅತೀ ವೇಗ ಮತ್ತು ಅಜಾಗ್ರತೆಯಿಂದ ಚಲಾವಣೆ ಮಾಡಿಕೊಂಡು ಬಂದು ಮೃತ ರಜತ್ ರವರಿಗೆ ಡಿಕ್ಕಿ ಹೊಡೆಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದಲೇ ಅಪಘಾತ ವಾಯ್ತು ಎಂದರೆ ಸರಿಯಲ್ಲ. ಈ ವಿಚಾರವನ್ನು ಪೋಲೀಸರಿಗೆ ಹೇಳಿ ದೂರು ಕೊಟ್ಟಿದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.

ಮಹಜರ್ ಗಳನ್ನು ಯರು ಬರೆದಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ನಿಪಿ-3 ಮತ್ತು 6 ರ ಮಹಜರ್ ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.